## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕೊಳ್ಳೇಗಾಲ

**ಸಿ ಸಿ ಸಂಖ್ಯೆ 818 /2022**

ಚಾಸಾ 3 ಫ್ರಾಸಾ 6

ಸಾಕ್ಷಿಯ ಹೆಸರು : ಚಂದ್ರಶೇಖರ್

ತಂದೆಯ ಹೆಸರು : ನಂಜಯ್ಯ

ವಯಸ್ಸು : 40 ವರ್ಷ

ಉದ್ಯೋಗ : ವ್ಯವಸಾಯ

ವಾಸ ಸ್ಥಳ : ಸಿದ್ದಯ್ಯನಪುರ

ದಿನಾಂಕ 28.11 .2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ – ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ಚಾಸಾ 2 ನನಗೆ ಗೊತ್ತು. ಸಾಕ್ಷಿಯು ನಿಪಿ-1ರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1(ಎಫ್) ಎಂದು ಗುರುತಿಸಲಾಯಿತು. ಈಗ್ಗೆ 3 ವರ್ಷಗಳ ಹಿಂದೆ ಚಾಸಾ 1ರವರು ನಮ್ಮನ್ನು ಜಾಗೇರಿಯ ಒಂದು ಬೆಟ್ಟದ ಬಳಿ ನಮ್ಮನ್ನು ಕರೆದುಕೊಂಡು ಹೋಗಿದ್ದರು. ಅಲ್ಲಿ ಜಾಗೇರಿಯ ಒಬ್ಬ ವ್ಯಕ್ತಿಯಿಂದ ಬಂದೂಕು ಮತ್ತು ಪುಡಿಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಆ ಸಮಯದಲ್ಲಿ ನಿಪಿ-1 ಕ್ಕೆ ಸಹಿ ಮಾಡಿದ್ದೆ. ಸಾಕ್ಷಿಯು ನ್ಯಾಯಾಲಯದ ಸಮಕ್ಷಮ ಇರುವ ಮುದ್ದೇಮಾಲು 1 ರಿಂದ 8 ನ್ನು ನೋಡಿ ಗುರುತಿಸಿದ್ದು, ಆ ದಿನ ಸದರಿ ಮಾಲುಗಳನ್ನು ಆರೋಪಿತನಿಂದ ನನ್ನ ಸಮಕ್ಷಮ ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದು ತಿಳಿಸಿರುತ್ತಾರೆ. ಆ ದಿನ ನಾನು, ಚಾಸಾ 1 , ಚಾಸಾ 2 , ಚಾಸಾ 6 ರವರ ಜೊತೆ ಸ್ಥಳಕ್ಕೆ ಹೋಗಿದ್ದೆ. ಆ ದಿನ ಮಾಲು ಅಮಾನತ್ತು ಪಡಿಸಿಕೊಳ್ಳಲಾದ ವ್ಯಕ್ತಿಯನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ ನ್ಯಾಯಾಲಯದ ಮುಂದೆ ಆರೋಪಿ ಗೈರು ಹಾಜರಾಗಿದ್ದು ಆರೋಪಿ ಪರ ವಕೀಲರು ವಿನಾಯತಿ ಅರ್ಜಿ ಸಲ್ಲಿಸಿ ಆರೋಪಿಯ ಗುರುತಿಸುವಿಕೆಯ ಬಗ್ಗೆ ತಕರಾರು ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ಸಾಕ್ಷಿಯು ನಿಪಿ- 4 ರಿಂದ ನಿಪಿ-7 ಫೋಟೋಗಳಲ್ಲಿ ತನ್ನನ್ನು ನೋಡಿ ಗುರುತಿಸಿದ್ದ ಅದರಲ್ಲಿರುವ ಆರೋಪಿಯನ್ನೂ ಸಹಾ ನೋಡಿ ಗುರುತಿಸಿರುತ್ತಾರೆ. ಮುಂದುವರೆದು, ಸದರಿ ಫೋಟೋಗಳನ್ನು ಸ್ವತ್ತನ್ನು ಅಮಾನತ್ತು ಪಡಿಸಿಕೊಳ್ಳುವ ಕಾಲದಲ್ಲಿ ತೆಗೆಯಲಾಯಿತು ಎಂದು ನುಡಿಯುತ್ತಾರೆ. ನಾನು ಪೊಲೀಸರ ಸಮಕ್ಷಮ ಯಾವುದೇ ಹೇಳಿಕೆ ನೀಡಿರುವುದಿಲ್ಲ.

(**ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಬೇಕೆಂದು ಮನವಿ ಮಾಡಿದ್ದು ಸದರಿ ಮನವಿಯನ್ನು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.**)

**ಪಾಟೀ ಸವಾಲು : ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ದಿನಾಂಕಃ 06.09.2021 ರಂದು ರಾತ್ರಿ 9.30 ಗಂಟೆ ಸಮಯದಲ್ಲಿ ನಾನು ಮತ್ತು ಚಾಸಾ 2 ರವರು ಕೋರ್ಟ್ ಸರ್ಕಲ್ ಬಳಿ ಟೀ ಕುಡಿಯುತ್ತಿದ್ದಾಗ ಚಾಸಾ6ರವರು ಬಂದು ಚಾಸಾ 1ರವರು ಕರೆಯುತ್ತಿರುವುದಾಗಿ ನಮ್ಮನ್ನು ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿ. ಚಾಸಾ 1ರವರು ತಮ್ಮ ಕಛೇರಿಯಲ್ಲಿ, ಅವರಿಗೆ ಬಂದ ಮಾಹಿತಿಯನ್ನು ತಿಳಿಸಿ ದಾಳಿ ಕಾಲದಲ್ಲಿ ಇರಬೇಕೆಂದು ನೋಟೀಸ್

ಕೊಟ್ಟಿದ್ದರು ಎಂದರೆ ಸರಿ. ಆ ದಿನ ನಾವು 9.45 ಗಂಟೆಗೆ ಚಾಸಾ 1ರವರ ಕಛೇರಿ ಬಿಟ್ಟು ನಾವು ಶಿಲುವೈಪುರ ರಸ್ತೆಯಲ್ಲಿ ಜಪಮಾಲೆ ಮಾತಾ ಗುಡ್ಡದ ಪಕ್ಕದಲ್ಲಿರುವ ತಂಬಿಯವರ ಜಮೀನಿಗೆ ಸುಮಾರು 10.15 ಗಂಟೆ ಸಮಯಕ್ಕೆ ಹೋಗಿದ್ದೆವು ಎಂದರೆ ಸರಿ. ಇಲಾಖಾ ವಾಹನ ಮತ್ತು ಸಿಬ್ಬಂದಿ ವಾಹಗಳನ್ನು ದೂರದಲ್ಲಿ ನಿಲ್ಲಿಸಿ ಸ್ವಲ್ಪ ಮರೆಯಲ್ಲಿ ನಿಂತು ಗಮನಿಸುತ್ತಿದ್ದೆವು ಎಂದರೆ ಸರಿ. ಅದೇ ದಿನ ರಾತ್ರಿ 10.30 ಗಂಟೆ ಸಮಯದಲ್ಲಿ ಒಬ್ಬ ವ್ಯಕ್ತಿ ಪಾಸ್ಕಲ್ ನಗರ ಶಿಲುವೈಪುರ ಮುಖ್ಯ ರಸ್ತೆ ಕಡೆಯಿಂದ ಜಪಮಾಲಾ ಮಾತಾ ಗುಡ್ಡದ ಅರಣ್ಯದ ಕಡೆಗೆ ತಲೆಗೆ ನೆತ್ತಿ ಬ್ಯಾಟರಿ ಕಟ್ಟಿಕೊಂಡು ಬಂದೂಕು ಹಿಡಿದುಕೊಂಡು ಕೈನಲ್ಲಿ ಬ್ಯಾಗ್ ಹಿಡಿದುಕೊಂಡು ಹೋಗುತ್ತಿದ್ದುನ್ನು ಕಂಡು ಆತನನ್ನು ಸುತ್ತುವರೆದು ಹಿಡಿದಿರುತ್ತಾರೆ ಎಂದರೆ ಸರಿ. ಆತನನ್ನು ಹಿಡಿದು ವಿಚಾರಣೆ ಮಾಡಲಾಗಿ ಆತ ತನ್ನ ಹೆಸರನ್ನು ಗೋವಿಂದರಾಜು, 42 ವರ್ಷ , ಹಳೇಕೋಟೆ, ಸತ್ತೇಗಾಲ ಜಾಗೇರಿ ಎಂಬುದಾಗಿ ತಿಳಿಸಿದ್ದು ನಾಡ ಬಂದೂಕು ಹೊಂದಿದ್ದ ಬಗ್ಗೆ ಪರವಾನಿಗೆ ಇಲ್ಲ ಎಂಬುದಾಗಿ ತಿಳಿಸಿರುತ್ತಾನೆ ಎಂದರೆ ಸರಿ. ಹಾಗೂ ತಾನು ಬೇಟೆಯಾಡಲು ಹೋಗುತ್ತಿರುವುದಾಗಿ ತಿಳಿಸಿರುತ್ತಾನೆ ಎಂದರೆ ಸರಿ. ನ್ಯಾಯಾಲಯದ ಸಮಕ್ಷಮ ಇರುವ ಮುದ್ದೇಮಾಲು 1 ರಿಂದ 8 ನ್ನು ಆರೋಪಿಯಿಂದ ಅಮಾನತ್ತು ಪಡಿಸಿಕೊಂಡು ಎಂ ಎಂಬ ಅಕ್ಷರದಿಂದ ಸೀಲು ಮಾಡಲಾಯಿತು ಎಂದರೆ ಸರಿ.

ಸದರಿ ಮಾಲುಗಳನ್ನು ಅಮಾನತ್ತು ಪಡಿಸಿಕೊಳ್ಳಮ ಕಾಲದಲ್ಲಿ ನಾನು ಹಾಗೂ ಚಾಸಾ 2ರವರು ಇದ್ದು ನಿಪಿ-1 ದಾಖಲೆಗೆ ಸಹಿ ಮಾಡಿರುತ್ತೇವೆ ಎಂದರೆ ಸರಿ. ಆ ಸಮಯದಲ್ಲಿ ನಿಪಿ-4 ರಿಂದ ನಿಪಿ-7 ಫೋಟೋಗಳನ್ನು ತೆಗೆಯಲಾಯಿತು ಎಂದರೆ ಸರಿ. ನಾನು ಪೊಲೀಸರ ಸಮಕ್ಷಮ ಈ ಮೇಲ್ಕಂಡ ಎಲ್ಲಾ ಸಂಗತಿಗಳನ್ನು ಹೇಳಿದ್ದೆ ಎಂದರೆ ಸರಿ. ಅದರಂತೆ ಅವರು ನನ್ನ ಹೇಳಿಕೆ ಪಡೆದುಕೊಂಡಿದ್ದರು ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಶ್ರೀ ಎಂ ಎಸ್ ಕೆ ವಕೀಲರಿಂದ**

ನನಗೆ ಪೊಲೀಸ್ ಇಲಾಖೆಯಲ್ಲಿ ಎಲ್ಲರೂ ಪರಿಚಯಸ್ಥರು ಎಂದರೆ ಸರಿ. ಸಾಮಾನ್ಯವಾಗಿ ಪೊಲೀಸ್ ಪ್ರಕರಣಗಳಲ್ಲಿ ಮಹಜರ್ ಗಾಗಿ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿ. ಆ ದಿನ ರಾತ್ರಿ 10.30 ಗಂಟೆ ಸಮಯದಲ್ಲಿ ನನ್ನನ್ನು ಜಾಗೇರಿಗೆ ಕರೆದುಕೊಂಡು ಹೋಗಿದ್ದರು. ಜಾಗೇರಿಯಲ್ಲಿ ಎಷ್ಟು ಗ್ರಾಮಗಳು ಇವೆ ಎಂದು ನನಗೆ ಗೊತ್ತಿಲ್ಲ. ನಾನು ನಿಖರವಾಗಿ ಯಾವ ಗ್ರಾಮಕ್ಕೆ ಹೋಗಿದ್ದೆ ಎಂದು ನನಗೆ ಗೊತ್ತಿಲ್ಲ ಹಾಗೂ ಯಾವ ಸ್ಥಳ ಎಂದು ನಿಖರವಾಗಿ ಗೊತ್ತಿಲ್ಲ ಎಂದರೆ ಸರಿ. ನಿಪಿ-1 ನ್ನು ನಾನು ಓದಿ ಆ ನಂತರ ಸಹಿ ಮಾಡಿರುತ್ತೇನೆ. ನಿಪಿ-1 ನ್ನು ಯಾರು ಬರೆದರು ಎಂದರೆ ಸಾಕ್ಷಿಯು ನಾನು ಠಾಣೆಯ ಹೊರ ಭಾಗದಲ್ಲಿ ಕುಳಿತಿದ್ದೆ ಹಾಗಾಗಿ ಯಾರು ಬರೆದರು ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ನಂತರ ನನ್ನನ್ನು ಠಾಣೆಯ ಒಳಗೆ ಕರೆದು ಸಹಿ ಪಡೆದುಕೊಂಡಿರುತ್ತಾರೆ. ನಿಪಿ-4 ರಿಂದ ನಿಪಿ-7 ರಲ್ಲಿ ಇರುವ ಆರೋಪಿಯ ಬಗ್ಗೆ ನನಗೆ ಖುದ್ದು ಮಾಹಿತಿ ಇರುವುದಿಲ್ಲ ಆದರೆ ಆತನ ಹೆಸರು ಗೋವಿಂದರಾಜು ಎಂದು ನನಗೆ ತಿಳಿದಿರುತ್ತದೆ. ಚಾಸಾ 1ರವರು ಆತನ ಹೆಸರನ್ನು ಗೋವಿಂದರಾಜು ಎಂದು ತಿಳಿಸಿದ ಮೇರೆಗೆ ನಾನು ಹೇಳುತ್ತಿದ್ದೇನೆ ಎಂದರೆ ಸರಿ. ಈ ಪ್ರಕರಣದ ಮುದ್ದೇಮಾಲು 1 ನ್ನು ಆರೋಪಿಯಿಂದ ಪಡೆದುಕೊಂಡಿರುತ್ತಾರೆ. ಆ ದಿನ ಪೊಲೀಸರು ಒಂದು ಬೆಟ್ಟದ ಬಳಿ ಆರೋಪಿಯನ್ನು ಹಿಡಿದು

<u>**ಸಿ ಸಿ ಸಂಖ್ಯೆ 818 /2022**</u>

ಚಾಸಾ 3 ಪ್ರಾಸಾ 6

ಮುದ್ದೇಮಾಲು 1 ನ್ನು ಆರೋಪಿಯಿಂದ ವಶಕ್ಕೆ ಪಡೆದುಕೊಂಡಿರುತ್ತಾರೆ. ಆರೋಪಿಯಿಂದ ವಶಕ್ಕೆ ಪಡೆದ ಸ್ಥಳದಲ್ಲಿಯೇ ಫೋಟೋ ತೆಗೆಯಲಾಯಿತು. ಪೊಲೀಸರೇ ಮುದ್ದೇಮಾಲು 1 ನ್ನು ಆರೋಪಿಗೆ ಕೊಟ್ಟು ಫೋಟೋ ತೆಗೆದು ಆ ನಂತರ ನನಗೆ ಇದೇ ರೀತಿ ಸಾಕ್ಷ್ಯ ಹೇಳುವಂತೆ ಹೇಳಿದ್ದರು ಎಂದರೆ ಸರಿಯಲ್ಲ. ಚಾಸಾ 1ರವರು ತಮಗೆ ಬಂದ ಮಾಹಿತಿಯನ್ನು ನನಗೆ ತಿಳಿಸಿಲ್ಲ ಎಂದರೆ ಸರಿ. ಮುದ್ದೇಮಾಲು 1 ರಿಂದ 8 ರ ಮೇಲೆ ಆ ದಿನದ ಸಮಯ ಹಾಗೂ ದಿನಾಂಕವನ್ನು ನಮೂದು ಮಾಡಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ನಾನು ಆ ದಿನ ಸ್ಥಳಕ್ಕೆ ಹೋಗಿಲ್ಲ, ಚಾಸಾ 1ರವರು ಹೇಳಿದಂತೆ ನಾನು ಈ ದಿನ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಆರೋಪಿಯಿಂದ ಯಾವುದೇ ಮುದ್ದೇಮಾಲುಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸರ ಸಮಕ್ಷಮ ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿ.

<u>**ಮರು ವಿಚಾರಣೆಃ ಇರುವುದಿಲ್ಲ**</u>

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

( ಕಾವ್ಯಶ್ರೀ. ಎಂ )
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ., ಕೊಳ್ಳೇಗಾಲ.